Distribution of Government land under new Darkhast Rules in Sorab and Sagar taluks.

*Q.—247. Sri V. S. LAKSHMIKANTHAPPA (Sagar).—

Will the Government be pleased to state :—

(*a*) the extent of Government land distributed under the new Darkhast Rules in Sorab and Sagar Taluks ;

(*b*) the number of Darkhast applications for lands received from the people of the said Taluks that are still pending disposal ;

(*c*) Since when these applications are pending and the reasons for the pendency ?

A.—Sri M. V. KRISHNAPPA (Minister for Revenue).—

(*a*) 4,219 Acres 11 Guntas.

(*b*) 1,666.

(*c*) The applications are pending from 1958-59 as no waste lands are available for disposal and as the question of getting the lands applied for released in favour of the Revenue Department is under correspondence with the authorities of the Forest and the Public Works Departments.

Sri V. S. LAKSHMIKANTHAPPA.—Will the Government be pleased to note that pendency and delay in granting lands will make the landless take to unauthorised cultivation for their livelihood ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು, ಸ್ವಾಮಿ ನಿಧಾನ ಮಾಡುವುದರಿಂದ ಬಡವರಿಗೆ ತೊಂದರೆಯಾಗುತ್ತದೆ. ಪಟೇಲ ಶಾನಭೋಗರ ಅಪ್ಪಣೆ ಪಡೆದುಕೊಂಡು ಹಳ್ಳಿಗಳಲ್ಲಿ unauthorised occupation ನಡೆಯುತ್ತ ಇರುತ್ತದೆ.

Sri V. S. LAKSHMIKANTHAPPA.—What is the extent of land available in Sorab and Sagar for disposal ?

ಶ್ರೀ ಎಂ. ವಿ. ಕೃಷ್ಣಪ್ಪ.—ಈಗ ಏನೂ ಇಲ್ಲ, ಇರುವ ಭೂಮಿಯನ್ನು ಹಂಚಿಬಿಟ್ಟಿದ್ದಾರೆ ಎಂದು ರಿಪೋರ್ಟ್ ಬಂದಿದೆ. ಫಾರೆನ್ಸ್ ಡಿಪಾರ್ಟಮೆಂಟಿನವರು ಸಹ ಭೂಮಿಯನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ.

Sri G. VENKATAI GOWDA.—Has any request been made to the Forest Department to release land, and if so, what is the extent that has been asked for ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಟ್ಟು 435 ಅರ್ಜಿಗಳಿವೆ. ಇಪ್ಪತ್ತು ಅರ್ಜಿಗಳಲ್ಲಿ ಪಿ. ಡಬ್ಲ್ಯು. ಡಿ ಯವರು ರಿಲೀಜ್ ಮಾಡಬೇಕಾಗಿದೆ. ಅರವತ್ತು ಅರ್ಜಿಗಳಲ್ಲಿ ಫಾರೆನ್ಸ್ ಡಿಪಾರ್ಟಮೆಂಟಿನವರು ರಿಲೀಜ ಮಾಡಬೇಕಾಗಿದೆ. ಉಳಿದ ಅರ್ಜಿಗಳು ಪೆಂಡಿಂಗ್ ಇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಿಲೀಜ್ ಮಾಡುವುದನ್ನು ತಡ ಮಾಡುವುದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಡನ್ನು ಕಳೆದುಕೊಳ್ಳಬಾರದು ಎಂದು ಫಾರೆಸ್ಟ್ ಡಿಪಾರ್ಟಮೆಂಟಿನವರು ಬಯಸುತ್ತಾರೆ. ಕೆರೆಗಳಿಗೆ ಅನ್ಯಾಯ ಮಾಡಬಾರದು ಎಂದು ಪಿ. ಡಬ್ಲ್ಯು.ಡಿ ಯವರ ಇರಾದೆ ಇರುತ್ತದೆ.

1-30 P.M.

ಶ್ರೀ ಕೆ. ಲಕ್ಕಪ್ಪ.—ಸೊರಬ ಸಾಗರ ತಾಲ್ಲೂಕುಗಳಲ್ಲಿ ಏಲೇ ಮಾಡಲು ಜಮೀನು ಇಲ್ಲವೆಂದು ಹೇಳಿದ್ದಾರೆ. ಈ ಭಾಗದಲ್ಲಿ ಜಮೀನಿಲ್ಲದೆ ಇರುವ ರೈತರು ಎಷ್ಟು ಜನರಿದ್ದಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಸಮಾಚಾರ ನನ್ನಲ್ಲಿ ಲ್ಲ. 450 ಜನರ ಅರ್ಜಿಗಳು ಪೆಂಡಿಂಗ್ ಇವೆ. ಅವರೆಲ್ಲರೂ ಜಮೀನು ಇಲ್ಲದೆ ಇರುವ ರೈತರಿರಬಹುದು.

ಶ್ರೀ ಗಾಂಜಿವೀರಪ್ಪ.—ದರಖಾಸ್ತು ಮೇರೆ ಜಮೀನು ಕೊಡುವಾಗ ಏನಾದರೂ ಕಂಡಿಷನ್‌ಗಳನ್ನು ಹಾಕಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಸಂದರ್ಭಗಳಲ್ಲಿ ಕಿಮ್ಮತ್ತುಕಟ್ಟಿ upset price ನಲ್ಲಿ ಕೊಡುತ್ತೇವೆ. ಅನೇಕ ಸಂದರ್ಭಗಳಲ್ಲಿ ಉಚಿತವಾಗಿಯೂ ಕೊಡುತ್ತೇವೆ. ಅನೇಕ ವಿಧವಾದ ಕಂಡಿಷನ್‌ಗಳಿರುತ್ತವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಭೂಮಿ ಅರಣ್ಯಕ್ಕೆ ಒಂದುಪಕ್ಷ ಬೇಕಾಗುವುದಾದರೆ, ಅದರ ಬಗ್ಗೆ ಸರ್ಕಾರದವರು ಒಂದು ತೀರ್ಮಾನ ತೆಗೆದುಕೊಂಡು ಹಾಗೆ ತಿಳಿಸುವುದು ನೂಕ್ತವಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ನಾನೂ ಸಹ ಈ ವಿಚಾರದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪಿ ಸಾಧ್ಯವಾದಷ್ಟು ಬೇಗ ಇತ್ಯರ್ಥ ಮಾಡುತ್ತೇವೆಂದು ಹೇಳುತ್ತೇನೆ.

———

Construction of Bridges in Indi Taluk.

*Q.—390. Sri J. L. KABADI (Bardol).—

Will the Government be pleased to state :—

(*a*) whether they are aware of the hardships caused to the people for want of the following bridges in Indi Taluk :—

1. Shiradona bridge.
2. Baradola bridge.
3. Halasangi bridge.
4. Kalhala bridge.
5. Jevoora bridge.
6. Nimbaragi bridge.
7. Jigajeevani bridge.
8. Thadavalaga bridge.
9. Bolegoan bridge.
10. Horthi-Nimbala road bridge.

(*b*) whether any estimates have been prepared for the above bridges;

(*c*) whether it is a fact that the communication will be completely cut off during the rainy season and if so, when they intend to take up the construction of these bridges?

A.—**Sri VEERENDRA PATIL** (Minister for Public Works).—

(*a*) Yes.

(*b*) Except for Kalhalla bridge, no other estimates are prepared.

(*c*) Yes; the works will be taken up according to priority and availability of funds.

ಶ್ರೀ ಜೆ. ಎಲ್. ಕಬಾಡಿ.—ಕಲ್ಲಹಳ್ಳ ಸೇತುವೆಯ ಹೊರತಾಗಿ ಉಳಿದ ಸೇತುವೆಗಳ ಅಂದಾಜು ತಯಾರಾಗುವುದಕ್ಕೆ ಏನು ತೊಂದರೆ ಇದೆ?

†ಶ್ರೀ ವೀರೇಂದ್ರ ಪಾಟೀಲ್.—ಹಣದ ತೊಂದರೆ ಇದೆ. "Scarcity Works"ನಲ್ಲಿ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಆ ರಸ್ತೆಗಳ ಮೇಲೆ ಸೇತುವೆಗಳನ್ನು ಕಟ್ಟಿಸಬೇಕು. ಈಚೆಗೆ ಡಿ.ಎಲ್.ಬಿ. ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಅದಕ್ಕೂ ಸಾಕಷ್ಟು ದುಡ್ಡಿಲ್ಲ. ಈ ಎಲ್ಲ ತೊಂದರೆಗಳಿಂದ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡುವುದಕ್ಕೆ ತಡವಾಗಿದೆ.

ಶ್ರೀ ಜೆ. ಎಲ್. ಕಬಾಡಿ.—ಹಣದ ತೊಂದರೆ ಇದ್ದರೂ, ಎಸ್ಟಿಮೇಟ್ ತಯಾರ್ಮಾಡುವುದಕ್ಕೆ ತೊಂದರೆ ಏನಿದೆ?

ಶ್ರೀ ವೀರೇಂದ್ರ ಪಾಟೀಲ್.—"Scarcity Works"ನಲ್ಲಿ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದೇವೆ. ಆ ರಸ್ತೆಗಳು ಇನ್ನೂ ಪೂರ್ತಿಯಾಗಿಲ್ಲ. ಹೀಗಿರುವಾಗ ಈ ರಸ್ತೆಗಳ ಮೇಲೆ ಕಟ್ಟಬೇಕಾಗಿರುವ ಸೇತುವೆಗಳಿಗೆ ಎಸ್ಟಿಮೇಟ್ ತಯಾರು ಮಾಡಿಹಾಗೆಯೇ ಇಟ್ಟುಕೊಂಡಿರುವುದು ಸರ್ಕಾರದ ನೀತಿಯಲ್ಲ.

ಶ್ರೀ ಜೆ. ಎಲ್. ಕಬಾಡಿ.—ಈ ಸೇತುವೆಗಳನ್ನು ಕಟ್ಟುವುದರಿಂದ ಹೋಲಾಪುರ, ಪಂಡರಾಪುರ ಮತ್ತು ಪೂನಾ ಈ ಊರುಗಳಿಗೆ ಹೋಗತಕ್ಕ ಯಾತ್ರಿಕರಿಗೆ ಅನುಕೂಲವಾಗುವುದು ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಗೊತ್ತಿದೆ.

Establishment of a Tractor Plant in the State.

Q.—397. **Sri H. R. KESHAVA MURTHY** (Gandasi).—

Will the Government be pleased to state:—

(*a*) whether they are aware that unless and until the farms are mechanised the output of agricultural commodities cannot be considerably enhanced;

(*b*) whether they are aware that, for implementation of mechanised agriculture, tractors and tractor-combines are required in large numbers;

(*c*) if so, whether they intend to establish any tractor plant in the State to manufacture tractors and spare parts?

A.—**Sri G. NARAYANA GOWDA** (Minister for Agriculture).—

(*a*) The Government are aware of the advantages of mechanised cultivation; mechanisation is one of the means for increasing production in large holdings where mechanised cultivation is possible.

(*b*) Yes.

(*c*) Requires examination.

Sri H. R. KESHAVA MURTHY.—You have said that in large holdings mechanised cultivation is possible. Are you not aware that even in small plots of land with an extent of one acre cultivation by tractor is possible?

ಶ್ರೀ ಜಿ. ನಾರಾಯಣಗೌಡ.—ಸಣ್ಣ ಟ್ರಾಕ್ಟರುಗಳನ್ನಿಟ್ಟುಕೊಂಡು ಅದರಿಂದ ಉತ್ಪತ್ತಿ ಮಾಡಿ ಅನುಕೂಲ ಪಡೆಯುವ ಹಾಗಿದ್ದರೆ ಮಾಡಬಹುದು.

Sri H. R. KESHAVA MURTHY.—Mysore being a model State with a steel plant in the State, do you not feel that it would be helpful to the whole of India if you start such a tractor plant? Your answer is doubtful.

Sri G. NARAYANA GOWDA.—My answer is not doubtful; I have answered, that it requires examination.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈ ಪ್ಲಾಂಟ್ ಹಾಕುವ ಬಗ್ಗೆ ಯಾರಾದರೂ ಅರ್ಜಿಗಳನ್ನು ಸರ್ಕಾರಕ್ಕೆ ಕಳಿಸಿದ್ದಾರೆಯೇ?

ಶ್ರೀ ಜಿ. ನಾರಾಯಣಗೌಡ.—ಇಲ್ಲ, ಸ್ವಾಮಿ.

ಶ್ರೀ ವಿ. ಎಂ. ದೇವ್.—ಟ್ರಾಕ್ಟರುಗಳನ್ನು ಒಬ್ಬೊಬ್ಬರಿಗೆ ಕೊಡುವುದಕ್ಕೆ ಬದಲಾಗಿ ಒಂದೊಂದು ಪಂಚಾಯಿತಿಗೆ ಒಂದೊಂದು ಟ್ರಾಕ್ಟರ್ ಕೊಟ್ಟರೆ ಆಗ ದೊಡ್ಡ ಪ್ಲಾಟ್ ಆಗುವುದಿಲ್ಲವೇ? ಆ ದೃಷ್ಟಿಯಿಂದ ಏನಾದರೂ ಯೋಚನೆ ಮಾಡಿದ್ದೀರಾ?

ಶ್ರೀ ಜಿ. ನಾರಾಯಣಗೌಡ.—ಪಂಚಾಯಿತಿಗೆ ಕೊಡುವುದಕ್ಕೆ ಈಗಿರುವ ನಿಬಂಧನೆಗಳನ್ನು ಸ್ವಲ್ಪ ಸಡಿಲ (relax) ಮಾಡಬೇಕು. "Hire Purchase System" ಮೇಲೆ ಟ್ರಾಕ್ಟರ್ ಕೊಟ್ಟರೆ ಅಂಥವರ ಜಮೀನನ್ನು ಆಧಾರವಾಗಿ ತೆಗೆದುಕೊಳ್ಳುತ್ತೇವೆ. ಪಂಚಾಯಿತಿಗೆ ಯಾವ ಜಮೀನೂ ಇರುವುದಿಲ್ಲ.

ಶ್ರೀ ವಿ. ಎಂ. ದೇವ್.—ನಿಬಂಧನೆಗಳನ್ನು ಯಾವಾಗ relax ಮಾಡುತ್ತೀರಿ?

ಶ್ರೀ ಜಿ. ನಾರಾಯಣಗೌಡ.—ಅದನ್ನು ಯೋಚನೆ ಮಾಡೋಣ.

---

† Indicates that the remarks or speeches have not been revised by the member concerned.